ಅಧ್ಯಕ್ಷರು.—ನನಗೆ ಅನೇಕ ಮಾನ್ಯ ಸದಸ್ಯರಿಂದ ಬಹಳಷ್ಟು ನೋಟೀಸ್‌ಗಳು ಬರುತ್ತವೆ. ತಾವು ನನ್ನ ಚೇಂಬರಿಗೆ ಬಂದರೆ ತಾವು ಕೊಟ್ಟಿರುವ ನೋಟೀಸನ್ನು ನೋಡೋಣ.

ಶ್ರೀ ಅಜೀಜ್ ಸೇಠ್.—ಇಂತಹ ವಿಚಾರದಲ್ಲಿ ಬೇರೆ ಸದಸ್ಯರುಗಳು ಮಾತ್ರ ಇಲ್ಲಿ ಕೇಳುವುದಕ್ಕೆ ಅವಕಾಶ ಕೊಡುತ್ತೀರಿ. ನಾನು ಮಾತ್ರ ಏತಕ್ಕೆ ನಿಮ್ಮ ಚೇಂಬರ್‌ಗೆ ಬರಬೇಕು ?

ಅಧ್ಯಕ್ಷರು.—ತಾವು ಕೊಟ್ಟಿರುವ ನೋಟೀಸನ್ನು ನೋಡುತ್ತೇನೆ.

Non-payment of salary to Teachers in North Kanara District.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ (ಸಿಸಿಲ್).—ಉತ್ತರಕನ್ನಡ ಜಿಲ್ಲೆಯ ಉಪಾಧ್ಯಾಯರಿಗೆ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಸಂಬಳವನ್ನು ಕೊಟ್ಟಿಲ್ಲ. ಈ ಬಗ್ಗೆ ಆ ಜಿಲ್ಲೆಯ ಶಾಸಕರುಗಳೆರ್ಲಾ ಸೇರಿ ತಮಗೆ ಒಂದು ನೋಟೀಸ್ ಕೊಟ್ಟಿದ್ದೇವೆ. ಆ ಬಗ್ಗೆ ತಮ್ಮಿಂದ ಏನೂ ಉತ್ತರ ಬಂದಿಲ್ಲ. ವಿದ್ಯಾಮಂತ್ರಿಗಳಿಗೂ ಸಹ ಈ ವಿಷಯವನ್ನು ತಿಳಿಸಿದ್ದೇವೆ. ಅವರೂ ಸಹ ಇಲ್ಲಿ ಯಾವ ಸ್ಟೇಟ್‌ಮೆಂಟ್ ಕೊಡಲಿಲ್ಲ. ಅಲ್ಲಿಯ ಉಪಾಧ್ಯಾಯರು ಹೊಟ್ಟೆಗೆ ಅನ್ನ ವಿಲ್ಲದೆ ಸಾಯುತ್ತಿದ್ದಾರೆ. ನಾವುಗಳು ನೋಟೀಸ್ ಕೊಟ್ಟು ಎಂಟು ದಿವಸಗಳಾಯಿತು. ತಾವು ಈ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿಯ ಉಪಾಧ್ಯಾಯರುಗಳಿಗೆ ಸಂಬವಿಲ್ಲದೆ ತೊಂದರೆ ಪಡುತ್ತಿದ್ದಾರೆ.

ಇತ್ತೀಚೆಗೆ ಮಲೆನಾಡು ಪ್ರದೇಶಗಳಲ್ಲಿಯೂ ಕೂಡ ಒಂದೊಂದು ತರಗತಿಗೆ 25 ಜನ ಹುಡುಗರು ಇರಬೇಕೆಂದು ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ಮುಂಬೈ ಕರ್ನಾಟಕದಲ್ಲಿ ರುವಂತೆ ಮಲೆನಾಡು ಪ್ರದೇಶಗಳಲ್ಲಿ ಒಂದೊಂದು ತರಗತಿಗೆ 15 ಜನ ಹುಡುಗರು ಇರುವಂತೆ ಮಾಡುವುದು ಒಳ್ಳೆಯದು. ಈ ಬಗ್ಗೆ ದಿನಕರದೇಸಾಯಿ ಅವರು ಸಹ ವಿದ್ಯಾಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದಾರೆ. ಆದಕಾರಣ ನಾವು ಕೊಟ್ಟ ನೋಟೀಸ್‌ನ್ನು ತಾವು ಪರಿಶೀಲನೆ ಮಾಡಿ ಆ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಮತ್ತು ಅಲ್ಲಿಯ ಉಪಧ್ಯಾಯರುಗಳಿಗೆ ಕೂಡಲೇ ಸಂಬಳ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

Mr. SPEAKER.—I shall see what has happened to that. If it is a small matter, it could be disposed of in my chambers.

2-30 P.M-

Point *re* : vacation of seat consequent on absence from the House

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮೀ, ನಾನು ಕ್ರಿಯಾಲೋಪವಲ್ಲದ ಒಂದು ಪ್ರಸಂಗದ ಬಗ್ಗೆ ತಮಗೆ ಒಂದು ನೋಟೀಸು ಕಳುಹಿಸಿದ್ದೆ. ಅದು ರೂಲು 312ರ ಪ್ರಕಾರ. ಶ್ರೀಪಾನ್ ಎಸ್. ನಿಜಲಿಂಗಪ್ಪನವರು ಈ ಸಭೆಯ ಸದಸ್ಯರಾಗಿ ಶಿಗ್ಗಾಂವ್ ಕ್ಷೇತ್ರದಿಂದ ಆರಿಸಿ ಬಂದಿರುವವರು ಮತ್ತು ಇವರು ಹಿಂದಿನ ಮುಖ್ಯ ಮಂತ್ರಿಗಳೂ ಆಗಿದ್ದವರು. ಇದರಲ್ಲಿ ತಾವು ನನಗೆ ಬರೆದಂತೆ ರೂ ೨ 312ರ ಪ್ರಕಾರ ಕ್ರಿಯಾ ಲೋಪ ಇಲ್ಲ. ಆದರೆ ನಾನು ಕೊಟ್ಟಿರುವ ನೋಟೀಸಿನಲ್ಲಿ ಅವರನ್ನು ಈ ಸಭೆಯ ಸದಸ್ಯತ್ವದಿಂದ ತೆಗೆದುಹಾಕಬೇಕು ಎನ್ನುವ ಸೂಚನೆ ಬಗ್ಗೆ ಹೇಳುವಾಗ ಈ ಸಭೆಯ ರೂಲು 188 ಮತ್ತು 189ರಲ್ಲಿ ಇದು ಬರುತ್ತದೆ ಎಂತಲೂ ತಿಳಿಸಿದ್ದೇನೆ. ತಾವೇನವುಗೆ ಬರೆದಿರುವಂತೆ ಅವರು ಈ ಸಭೆಗೆ ಬಂದಿರುವುದು ಅಟೆಂಡೆನ್ಸ್ ರಿಜಿಸ್ಟರು ಪ್ರಕಾರ ಎರಡುದಿನಗಳು ಮಾತ್ರ ಎಂದರೆ 20ನೇ ಜನವರಿ 1969ರಲ್ಲಿ ಒಂದು ದಿನ ಮತ್ತು 24ನೇ ಫೆಬ್ರುವರಿ 1969ರಂದು ಒಂದು ದಿನ ಮಾತ್ರ. ಇದು ತಾವು ನನಗೆ ಕೊಟ್ಟ ಉತ್ತರದಲ್ಲೂ ಇರುತ್ತದೆ. ಆರ್ಟಿಕಲ್ 190 (4)ರಲ್ಲಿ ಅರವತ್ತು ದಿವಸಗಳು ಕಂಟಿನ್ಯುಯಸ್ ಆಗಿ ಸಭೆಯು ಅಧಿವೇಶನಕ್ಕೆ ಬಾರದೆ ಇದ್ದರೆ ಅಂತಹವರನ್ನು ಸಭೆಯ ಸದಸ್ಯತ್ವದಿಂದ ತೆಗೆಯಬಹುದು ಎಂದು ಇದೆ. ಮೊದಲು ಈ ಸಭೆ ಸೇರಿದುದು 2ನೇ ಸೆಪ್ಟಂಬರು 1968ರಿಂದ 19ನೇ ಸೆಪ್ಟಂಬರು 1968ರವರೆಗೆ 18 ದಿನಗಳ ಸಿಟ್ಟಿಂಗು ಆಯಿತು. ಇದರಲ್ಲಿ ಯಾವ ದಿವಸ ಬಂದಿದ್ದರು ಎಂಬುದು ತಿಳಿದಿಲ್ಲ. ಅನಂತರ ಹೌಸ್ ಪ್ರೊರೋಗ್ ಆಯಿತು. ಮತ್ತೆ ಹೌಸನ್ನು ಸಮನ್ ಮಾಡಿದುದು 13ನೇ ಜನವರಿಯಿಂದ. ಅಲ್ಲಿಂದ

(ಶ್ರೀ ಎಂ. ನಾಗಪ್ಪ)

29ನೇ ಜನವರಿಯವರೆಗೆ ನಡೆಯಿತು. ಮತ್ತೆ 21ನೇ ಫೆಬ್ರುವರಿ 1969ರಿಂದ ನಮ್ಮ ಸೆಷನ್ ನಡೆಯುತ್ತಿದೆ. ಒಟ್ಟು 65 ದಿನಗಳು ಜೋಯಿಟ್ sitting ಆದವು ಆದರೆ ಇವೋತ್ತಿನವರಗೂ ಇಲ್ಲಿ ಅವರು ಬಂದು ಕುಳಿತಿರುವುದು ತಮ್ಮ ಆಫೀಸ್ ಅಜೆಂಡೆನ್ಸ್ ಪ್ರಕಾರ 20ನೇ ಜನವರಿ 1969 ಒಂದು ದಿನ ಮತ್ತು 24ನೆ ಫೆಬ್ರುವರಿ 1969ರಂದು ಒಂದು ದಿನ ಬಾಕಿ 63 ದಿನಗಳು ಅಬ್ಸೆಂಟಾಗಿದ್ದಾರೆ. 60 ದಿವಸಗಳ ಮೇಲ್ಪಟ್ಟು ಸಭೆಗೆ ಬಾರದೇ ಹೋದರೆ ಅವರು ಸಭೆಯ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ ಎಂದು ಮೇಲ್ಕಂಡ ಆರ್ಟಿಕಲ್‌ನಲ್ಲಿ ಇದೆ.

ಆರ್ಟಿಕಲ್ 190 (4)ರ ಪ್ರಕಾರ ಶ್ರೀಮಾನ್ ನಿಜಲಿಂಗಪ್ಪನವರು ತಮ್ಮ ಸದಸ್ಯತ್ವವನು ಕಳೆದುಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಲೀಡರ್ ಆದುದಕ್ಕಾಗಿ ಅವರು ರೂಲ್ 189ರ ಪ್ರಕಾರ ಈ ಸಭೆಯ ಮುಂದೆ ಒಂದು ಸೂಚನೆಯನ್ನು ಮಾನ್ಯ ನಿಜಲಿಂಗಪ್ಪನವರನ್ನು ಈ ಸಭೆಯ ಸದಸ್ಯತ್ವದಿಂದ ವಜ ಮಾಡಬೇಕೆಂದು ತರಬೇಕು. ಅದನ್ನು ಪಾಸು ಮಾಡಿ ಶ್ರೀಮಾನ್ ನಿಜಲಿಂಗಪ್ಪನವರನ್ನು ಈ ಸಭೆಯ ಸದಸ್ಯತ್ವದಿಂದ ತೆಗೆದುಹಾಕಬೇಕು. ಇಲ್ಲದಿದ್ದರೆ ಅವರು ಈ ಸಭೆಗೆ ಬಂದು ಕೆಲಸ ಮಾಡಲು ಅರ್ಹರಿರುವುದಿಲ್ಲ. ಅವರು ಮೆಂಬರ್ ಆಗಿ ಬಂದಿರುವ ಶಿಗ್ಗಾವಿ ಕಾನ್‌ಸ್ಟಿಟ್ಯೂಯೆನ್ಸಿಯವರ ರೆಪ್ರೆಸೆಂಟೇಷನ್ ಈ ಸಭೆಯಲ್ಲಿ ಇಲ್ಲ ಎಂದರೆ ತಪ್ಪಾಗಲಾರದು. ಇದುವರೆಗೆ ಅವರ ಲೀವ್ ಆಫ್ ಅಬ್ಸೆನ್ಸ್ ಕೂಡ ಬಂದಿಲ್ಲ. ಆದಕ್ಕಾಗಿ ಆರ್ಟಿಕಲ್ 190 (4)ರ ಪ್ರಕಾರ ಅವರ ಸದಸ್ಯತ್ವ ಬಾರ್ ಆಗುತ್ತದೆ. ಆದುದರಿಂದ ಇದಕ್ಕೇ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸೂಚನೆ ಮೂವ್ ಮಾಡಬೇಕು. ಇಲ್ಲದಿದ್ದರೆ ಮೂವ್ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಅಥರೈಸ್ ಮಾಡಿದರೆ ಆ ಮೋಷನ್‌ನ್ನು ನಾನೇ ಮೂವ್ ಮಾಡುತ್ತೇನೆ. ಈಗಾಗಲೇ ರೂಲ್ 146ರ ಪ್ರಕಾರ ಒಂದು ಮೋಷನ್ ಕಳುಹಿಸಿದ್ದೇನೆ.

Mr. SPEAKER.—As regards the point raised by hon. Member Sri Nagappa, it appears more emphasis is laid on the word 'continuous'.

Sri K. H. PATIL (Hubli).—Is it a ruling, Sir? I am interested in this point. Here the constitutional points have to be thrashed out. Let us hear the Advocate General in the matter. Illegal point cannot be made legal. Law cannot be different to big people. Law is to be applied to one and all. For big people a different law cannot be applied and there cannot be another law for others. I have got certain things to be clarified. If a member remains absent for a period of 60 days without applying for leave of absence, he will have to be disqualified. We apply to you for leave of absence. Why should we do that? There is some sort of procedure that has to be followed. There should be no exception here If we go out for one or two days there is no need to apply for permission. Therefore, the Advocate General has to be consulted in this regard as certain aspects have to be clarified.

Mr. SPEAKER.—I have no powers to interpret the Constitution. But I have got one precedent that took place in the Lok Sabha. It appears, a similar point arose in the Lok Sabha. The interpretation was about the word 'continuous' absence. So far as I am concerned, I do not want to go beyond that.

Sri M. NAGAPPA.—Please reserve your ruling, Sir.

Mr. SPEAKER.—I have already given my ruling. As far I am concerned, there is no prima facie case. Regular procedure will have to be followed if a motion is moved by any body.

Sri M. NAGAPPA.—I want to know the mind of the Government in the matter.